# ಗಿಣಿಯ ಕಿತಾಪತಿ



ಶಶಿಧರ ಹಳೇಮನಿ

■ ಪ. ರಾಮಕೃಷ್ಣ ಶಾಸ್ತ್ರಿ

ರೈತ ತಿಮ್ಮಯ್ಯ ಹೊಲ ಉಳಲು ಕೋಣಗಳ ಖರೀದಿಗೆ ಸಂತೆಗೆ ಹೋಗಿದ್ದ. ಅಲ್ಲಿ ಒಬ್ಬನು ಗಿಣಿಗಳನ್ನು ಪಂಜರದಲ್ಲಿರಿಸಿ ಮಾರಾಟ ಮಾಡುತ್ತ ಇದ್ದ. ತಿಮ್ಮಯ್ಯ ಕುತೂಹಲದಿಂದ ಅವುಗಳನ್ನು ನೋಡುತ್ತ ನಿಂತುಕೊಂಡ. ಒಂದು ಗಿಣಿ ಅವನ ಗಮನ ಸೆಳೆಯಿತು. ಅದು ಮನುಷ್ಯರ ಹಾಗೆ ಬಹು ಚಂದವಾಗಿ ಮಾತನಾಡುತ್ತಿತ್ತು. ಅದನ್ನು ಕೇಳಿದವರೆಲ್ಲರೂ ಗಿಣಿಯ ಬೆಲೆ ವಿಚಾರಿಸಿ, ಮಾರಾಟಗಾರ ಹೇಳುವ ದುಬಾರಿ ಬೆಲೆ ತೆರಲಾಗದೆ ಹೊರಟುಹೋಗುತ್ತಿದ್ದರು.

ತಿಮ್ಮಯ್ಯ ಕೂಡ ಗಿಣಿಯ ಬೆಲೆ ವಿಚಾರಿಸಿದ. ‘ಜೋಡಿ ಕೋಣಗಳಿಗೆ ಎಷ್ಟು ಬೆಲೆಯಾಗುವುದೋ ಅಷ್ಟು ಹಣ ಕೊಡಿ’ ಎಂದು ಮಾರಾಟಗಾರ ಹೇಳಿದ. ಗಿಣಿಗೆ ಮನಸೋತಿದ್ದ ಅವನು ತನ್ನಲ್ಲಿರುವ ಹಣವನ್ನೆಲ್ಲ ಕೊಟ್ಟು ಗಿಣಿಯನ್ನು ಕೊಳ್ಳಲು ಮುಂದಾದ. ಅಗ ಅವನ ಬಳಿಯಿದ್ದ ಗೆಳೆಯ, ‘ನಿನಗೇನು ಹುಚ್ಚು ಹಿಡಿದಿಲ್ಲವಷ್ಟೆ? ಒಂದು ಗಿಣಿಗೆ ಜೋಡಿ ಕೋಣಗಳ ಬೆಲೆ ಸುರಿದು ಖರೀದಿ ಮಾಡುತ್ತಿರುವೆಯಲ್ಲ, ಗಿಣಿಯಿಂದ ಹೊಲ ಉಳಲು ಸಾಧ್ಯವಿಲ್ಲ. ವ್ಯವಸಾಯ ಮಾಡದಿದ್ದರೆ ಜೀವನ ನಡೆಸಲು ಕಷ್ಟವಾಗಬಹುದು’ ಎಂದು ಆಕ್ಷೇಪಿಸಿದ.

ಆದರೂ ತಿಮ್ಮಯ್ಯ, ‘ಸುಮ್ಮನಿರೋ. ಮಾತನಾಡುವ ಗಿಣಿ ಇದೆಯೆಂಬುದು ಆಳುವ ರಾಜನಿಗೆ ತಿಳಿದರೆ ಸಾಕು, ಎಷ್ಟು ಬೆಲೆ ಹೇಳಿದರೂ ಮರು ಮಾತಾಡದೆ ಕೊಟ್ಟು ಖರೀದಿ ಮಾಡುತ್ತಾನೆ. ಆ ಹಣದಿಂದ ಕೋಣಗಳನ್ನು ಕೊಳ್ಳಬಹುದು, ಒಳ್ಳೆಯ ಮನೆ ಕಟ್ಟಿಸಬಹುದು’ ಎಂದು ಹೇಳಿ ಗೆಳೆಯನ ಬಾಯಿ ಮುಚ್ಚಿಸಿದ.

ಮಾತನಾಡುವ ಗಿಣಿಯ ಪಂಜರದೊಂದಿಗೆ ತಿಮ್ಮಯ್ಯ ಮನೆಗೆ ಬಂದ. ಹೆಂಡತಿಗೆ ಗಿಣಿಯನ್ನು ತೋರಿಸಿದ. ಅದರ ಮಾತುಗಳನ್ನು ಕೇಳಿ ಅವಳು ಖುಷಿಪಡಬಹುದೆಂದು ಅವನು ಭಾವಿಸಿದ್ದರೆ ಅವಳಿಗೆ ಸಿಟ್ಟು ಬಂದಿತು. ‘ಸುಮ್ಮನೆ ಇದರಿಂದ ಶ್ರೀಮಂತನಾಗುವೆನೆಂಬ ಕನಸು ಕಾಣಬೇಡ. ಇದೇ ಗಿಣಿಯಿಂದ ಅಪಾಯವೂ ಬರಬಹುದು. ಹೋಗಲಿ, ಒಳಗೆ ಕಾಳುಕಡಿಗಳೆಲ್ಲ ಖಾಲಿಯಾಗಿವೆ. ಆಹಾರಕ್ಕೆ ಏನಾದರೂ ವ್ಯವಸ್ಥೆ ಮಾಡು’ ಎಂದು ಹೇಳಿದಳು.

ತಿಮ್ಮಯ್ಯನ ಕೈಯಲ್ಲಿ ಸ್ವಲ್ಪವೂ ಹಣವಿರಲಿಲ್ಲ. ರಾತ್ರಿಯ ಊಟಕ್ಕೆ ಏನು ಮಾಡಲಿ ಎಂದು ಯೋಚಿಸಿದ. ಆಗ ತನ್ನ ಹಿತ್ತಲಿನಲ್ಲಿ ಮೇಯುತ್ತಿದ್ದ ಒಂದು ಎಮ್ಮೆಯನ್ನು ನೋಡಿದ. ಅದು ಅದೇ ಊರಿನ ಹಾಲಿನ ವ್ಯಾಪಾರಿಗೆ ಸೇರಿತ್ತು. ತಿಮ್ಮಯ್ಯ ಮೆಲ್ಲಗೆ ಹೋಗಿ ಎಮ್ಮೆಯನ್ನು ಹಿಡಿದುಕೊಂಡ. ಪಾತ್ರೆ ತುಂಬ ಹಾಲು ಕರೆದುಕೊಂಡು ಬಂದು ಹೆಂಡತಿಗೆ ಕೊಟ್ಟು ಕುಡಿಯಲು ಹೇಳಿದ.

ಬೆಳಗಾಯಿತು. ಮಾತನಾಡುವ ಗಿಣಿ, ‘ನಾನು ಹೊರಗೊಮ್ಮೆ ಹೋಗಿ ಈ ಊರಿನ ಜನರೆಲ್ಲ ಹೇಗಿದ್ದಾರೆಂದು ಮಾತನಾಡಿಸಿ ಬರುತ್ತೇನೆ’ ಎಂದು ಹಾರಿಹೋಯಿತು. ಸ್ವಲ್ಪ ಹೊತ್ತು ಕಳೆದಾಗ ವ್ಯಾಪಾರಿ ಭುಸುಗುಡುತ್ತ ತಿಮ್ಮಯ್ಯನ ಮನೆಗೆ ಬಂದ. ‘ನಿನ್ನೆ ರಾತ್ರಿ ನೀನು ನನ್ನ ಎಮ್ಮೆಯ ಹಾಲು ಕರೆದು ಕುಡಿದೆಯಂತೆ. ನಿನಗೆ ಗೊತ್ತಿದೆ ತಾನೆ, ಬೇರೊಬ್ಬರ ವಸ್ತುಗಳನ್ನು ಅಪಹರಿಸಿದವರಿಗೆ ದೇಶದ ಪ್ರಭುಗಳು ಮರಣದಂಡನೆ ವಿಧಿಸುತ್ತಾರೆ. ನೀನೀಗ ನನ್ನ ಹಾಲಿನ ಪ್ರತಿಫಲವಾಗಿ ಎಮ್ಮೆಯ ಬೆಲೆಯನ್ನು ಕೊಡುವುದಾದರೆ ದೂರು ಕೊಡಲು ಹೋಗುವುದಿಲ್ಲ’ ಎಂದು ಕೈಚಾಚಿ ನಿಂತ. ತಿಮ್ಮಯ್ಯ ತನಗೇನೂ ತಿಳಿಯದೆಂದೇ ಹೇಳಿದ. ‘ನಿನ್ನ ಎಮ್ಮೆಯನ್ನು ನಾನು ಕಣ್ಣಿನಲ್ಲಿಯೂ ನೋಡಿಲ್ಲ. ನಿನಗೆ ಇಂತಹ ಸುಳ್ಳು ದೂರು ಹೇಳಿದವರಾದರೂ ಯಾರು?’ ಎಂದು ಕೇಳಿದ.

‘ದೂರು ಹೇಳಿದವರು ಹೊರಗಿನವರು ಯಾರೂ ಅಲ್ಲ. ನಿನ್ನೆ ಒಂದು ಪಂಜರದಲ್ಲಿ ಗಿಣಿಯೊಂದನ್ನಿರಿಸಿಕೊಂಡು ಬಂದೆಯಲ್ಲವೆ? ಅದೇ ಗಿಣಿ ಹಾರುತ್ತ ನನ್ನ ಮನೆಗೆ ಬಂತು. ನೀನು ಮಾಡಿದ ಕಳ್ಳತನವನ್ನು ನನಗೆ ಹೇಳಿಹೋಯಿತು’ ಎಂದ ವ್ಯಾಪಾರಿ.

ಗಿಣಿ ಪ್ರಾಣಾಪಾಯ ತಂದಿರುವುದು ಕಂಡು ತಿಮ್ಮಯ್ಯ ಭಯಗೊಂಡರೂ ತನಗೆ ಎಮ್ಮೆಯ ವಿಚಾರ ತಿಳಿಯದೆಂದೇ ವಾದಿಸಿದ. ವ್ಯಾಪಾರಿ ನೇರವಾಗಿ ರಾಜನ ಬಳಿಗೆ ಹೋಗಿ ದೂರು ಸಲ್ಲಿಸಿದ. ತಿಮ್ಮಯ್ಯ ತನ್ನ ಸಭೆಗೆ ಬರುವಂತೆ ರಾಜನಿಂದ ಕರೆ ಬಂತು.

ತಿಮ್ಮಯ್ಯ ರಾಜನ ಬಳಿಗೆ ಹೋದ. ‘ವ್ಯಾಪಾರಿಗೆ ಸೇರಿದ ಎಮ್ಮೆಯ ಹಾಲು ಕರೆದಿರುವೆ ಎಂದು ನೀನು ಸಾಕಿದ ಗಿಣಿ ಅವನಿಗೆ ಹೇಳಿದೆಯಂತೆ. ಇದು ನಿಜವೆ?’ ಎಂದು ಕೇಳಿದ. ತಿಮ್ಮಯ್ಯ